## 1885ನೇ ಇಸವಿ IIನೇ ನಂಬರ್ ರೆಗ್ಯೂಲೇಷನಿನಿಂದ ಮೈಸೂರು ದೇಶಕ್ಕೆ ಜಾರೀಗೆ ತರಲ್ಪಟ್ಟಂತೆ 1866ನೇ ಇಸವಿಯ XVIನೇ ನಂಬರ್ ಆಕ್ಟು.

ಕುಶಲ ವಿದ್ಯೆಗಳಲ್ಲಿಯೂ, ಕಾರಖಾನೆ ಕೆಲಸಗಳಲ್ಲಿಯೂ ಯಾ ಕೆಮಿಸ್ಟ್ರಿಯೊನೆ ರಸಶಾಸ್ತ್ರಗಳಲ್ಲಿಯೂ ಮಾತ್ರ ಉಪಯೋಗಿಸಲ್ಪಡುವ ಸ್ಪಿರಿಟ್ ಸಾರಾಯಿಗಳ ಮೇಲೆ ತೆರಬೇಕಾದ ತೆರಿಗೆಗಳನ್ನು ವಸೂಲ್‌ಮಾಡುವದಕ್ಕೋಸ್ಕರ ವಿಶೇಷ ನಿಯಮಗಳು ಕಲ್ಪಿಸುವದಕ್ಕಾಗಿ ಹುಟ್ಟಿದ ರೆಗ್ಯೂಲೇಷನು.

ಪೀಠಿಕೆ.

ಕುಶಲ ವಿದ್ಯೆಗಳಲ್ಲಿಯೂ ಕಾರಖಾನೆ ಕೆಲಸಗಳಲ್ಲಿಯೂ ಅಥವಾ ಕೆಮಿಸ್ಟ್ರಿಯೊನೆ ರಸಶಾಸ್ತ್ರ ಕೆಲಸಗಳಲ್ಲಿಯೂ ಮಾತ್ರ ಉಪಯೋಗಿಸಲ್ಪಡುವ ಸ್ಪಿರಿಟ್ ಸಾರಾಯಿಗಳ ಮೇಲೆ ತೆರಬೇಕಾದ ಯಕ್ಸೈಸ್ ತೀರ್ವೆಯನ್ನು ವಸೂಲ್ ಮಾಡುವದಕ್ಕೋಸ್ಕರ ವಿಶೇಷ ನಿಯಮಗಳನ್ನು ಉಂಟು ಮಾಡುವದು ಅವಶ್ಯಕವಾಗಿರುವದರಿಂದ ಇದರಡಿ ಕಂಡಂತೆ ವಿಧಿಸಲ್ಪಡುತ್ತೆ.—

ಯಂಥಾ ಸ್ಪಿರಿಟ್ ಸಾರಾಯಿಗಳು, ತೀರ್ವೆ ಸಾವತಿಮಾಡಿದನಂತರ, ಪರತ್ತುಗಳಿಗೆ ವಳಪಟ್ಟು ಡಿಸ್ಟಿಲೇರಿಯಿಂದ ಹೊರಗೆ ಸಾಗಿಸಲ್ಪಡಬಹುದು.

I. ಕುಶಲ ವಿದ್ಯೆಗಳಲ್ಲಿಯೂ, ಕಾರಖಾನೆ ಕೆಲಸಗಳಲ್ಲಿಯೂ ಅಥವಾ ಕೆಮಿಸ್ಟ್ರಿಯೊನೆ ರಸಶಾಸ್ತ್ರ ಕೆಲಸಗಳಲ್ಲಿಯೂ ಮೊತ್ತವೇ ಉಪಯೋಗಿಸುವದಕ್ಕೆ ಉದ್ದೇಶಿಸಲ್ಪಡುವ ಸ್ಪಿರಿಟ್ ಸಾರಾಯಿಗಳು, ಅವುಗಳ ಮೇಲೆ ತೀರ್ವೆ ವಸೂಲ್ ಮಾಡಿದ ಮೇಲೆ ಕ್ಲೇಕಡಾ 5ಕ್ಕೆ ಜಾಸ್ತೀಯಾಗದ ತೀರ್ವೆ ಮೊಬಲಗು ಸಾವತೀ ಮಾಡಲ್ಪಟ್ಟ ತರ್ವಾಯಿ ಮೈಸೂರು ದೇಶದ ಯಾವದಾದರೂ ಸ್ಥಳದೊಳಗಣ ಲೈಸೆನ್ಸ್ ಪಡೆದ ಡಿಸ್ಟಿಲ್ಲೇರಿಯಿಂದ ಸಾಗಿಸಲ್ಪಡಬಹುದು, ಪರಂತು ಯಾವ ಸಾರಾಯಿಗಳೇ ಆಗಲಿ ಅವು ಮನುಷ್ಯರ ಕೇವನೆಗೆ ಗುಣತಃ ಮತ್ತು ಯಲ್ಲ ಕಾಲಗಳಲ್ಲೂ ಅನರ್ಹವಾದ್ದಾಗಿ ಮಾಡಲ್ಪಟ್ಟ ಹೊರತು ಹಾಂಗೆ ಹೊರಗೆ ಸಾಗಿಸಲ್ಪಡ ಕೂಡದು.

ಸಾಗಿಸಲ್ಪಡಬೇಕಾದ ಸಾರಾಯಿಗಳು ಮನುಷ್ಯರ ಕೇವನೆ ವಗ್ಯೆರೆಗೆ ಅನರ್ಹವಾಗಿ ಮಾಡಲ್ಪಟ್ಟಿರುತ್ತೆಂಬ ವಿಷಯ ತಿಳಿದುಕೊಳ್ಳುವದಕ್ಕೂ ಮತ್ತು ಗೊತ್ತು ಮಾಡುವದಕ್ಕೂ ರೂಲ್ಸು.

II. ಶ್ರೀಮ್ ಮಹಾರಾಜಾ ಸರ್ಕಾರದವರಾಗಲೀ, ಶ್ರೀಮ್ ಮಹಾರಾಜಾ ಸರ್ಕಾರದವರಿಂದ ಆ ಬಗ್ಯೆ ವಿಶೇಷವಾಗಿ ಅಧಿಕಾರ ಕೊಡಲ್ಪಟ್ಟ ಇತರ ಅಧಿಕಾರಿಗಳಾಗಲಿ, ಮೇಲ್ಕಂಡ ಕೇಸುಗಳಿಗಾಗಿ ಸಾಗಿಸಲ್ಪಡುವದಕ್ಕೆ ಉದ್ದೇಶಿಸಲ್ಪಟ್ಟ ಸ್ಪಿರಿಟ್ ಸಾರಾಯಿಗಳು, ಈ ಆಕ್ಟಿನ Iನೇ ಸೆಕ್ಷನ್ ಪ್ರಕಾರ ಗುಣತಃ ಮತ್ತು ಯಂದಿಗೂ ಮನುಷ್ಯರ ಕೇವನೆಗೆ ಅನರ್ಹವಾಗಿ ಮಾಡಲ್ಪಟ್ಟಿರುತ್ತೆಂದು ತಿಳಿದುಕೊಳ್ಳುವದಕ್ಕೂ ಗೊತ್ತು ಮಾಡುವದಕ್ಕೂ ಮತ್ತು ಅವಶ್ಯಕ ಕಂಡರೆ ಅಂಥಾ ಸಾರಾಯಿಗಳನ್ನು ಸಾಗಿಸುವದಕ್ಕೆ ಯಿಚ್ಛೈಸುವ ಮನುಷ್ಯನ ಖರ್ಚಿನಿಂದ ತಮ್ಮ ಆಫೀಸರರ ಮೂಲಕ ಹಾಂಗೆ ಅನರ್ಹವಾಗಿ ಮಾಡಿಸುವದಕ್ಕೂ ಮತ್ತು ಖರೀದಿ ಪ್ರಕಾರ ತೀರ್ವೆಯು ವಸೂಲ್ ಮಾಡಲ್ಪಡಬೇಕಾದ ಸದರೀ ಸಾರಾಯಿಯ ಕಿಮ್ಮತ್ತನ್ನು ಗೊತ್ತು ಮಾಡುವದಕ್ಕೂ ಸುದಾ, ಶ್ರೀಮ್ ಮಹಾರಾಜ ರಾಜಾ ಸಾಹೇಬ್ ಬಹದ್ದೂರವರ ಮಂಜೂರಾತಿಗೆ ವಳಪಟ್ಟು, ಆಗಿಂದ್ಯಾಗೆ ರೂಲ್ಸನ್ನು ಪಿರ್ಮಾಣಿಸ ಬಹುದು.

ಅಂಥಾ ರೂಲ್ಸಗಳ ಉಲ್ಲಂಘನೆಗೆ ದಂಡನೆ.

III. ಶ್ರೀಮ್ ಮಹಾರಾಜಾ ಸರ್ಕಾರದವರಿಂದಲಾಗಲೀ ಮೇಲ್ಕಂಡಂತೆ ಇತರ ಅಧಿಕಾರಿಯಿಂದಲಾಗಲೀ ಈ ಆಕ್ಟಿನ ಮೇಲಿನ ಕಡೇ ಸೆಕ್ಷನ್ ಅನುಸರಿಸಿ ಪಿರ್ಮಾಣಿಸೋಣಾದ ಯಾವ ರೂಲನ್ನಾಗಲಿ ಮನಃಪೂರ್ತಿಯಾಗಿ ಉಲ್ಲಂಘಿಸುವ ಪ್ರತಿ ಮನುಷ್ಯನೂ, ಮಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸುವ ಯಾವ ಆಫೀಸರ್ ಮುಂದಾಗಲಿ ತಪ್ಪು ಹೊರಿಸಲ್ಪಟ್ಟ ತರ್ವಾಯ ಅಂಥಾ ಪ್ರತಿ ವಂದು ತಪ್ಪಿತಕ್ಕೂ ಐನೂರು ರೂಪಾಯಿಗಳಿಗೆ ಮಿಾರದ ವಂದು ಜುರ್ಮಾನೆ ತೆರುವದಕ್ಕೆ ಗುರಿಯಾಗತಕ್ಕದ್ದು.

ಈ ಆಕ್ಟು ಅನುಸರಿಸಿ ಸಾಗಿಸಲ್ಪಟ್ಟ ಸ್ಪಿರಿಟ್ ಸಾರಾಯಿಗಳನ್ನು ಮನುಷ್ಯರ ಕೇವನಾರ್ಹವಾಗಿ ಮಾಡುವದಕ್ಕೆ ಯತ್ನಿಸಿದರೆ ದಂಡನೆ.

IV. ಈ ಆಕ್ಟಿನ ನಿಯಮಗಳನುಸರಿಸಿ ವಂದು ಡಿಸ್ಟಿಲೇರಿಯಿಂದ ಸಾಗಿಸಲ್ಪಟ್ಟ ಸಾರಾಯಿಗಳನ್ನು ಮನುಷ್ಯರ ಕೇವನಾರ್ಹವಾಗಿ ಮಾಡಲಿಕ್ಕೆ ಯತ್ನಿಸುವಂಥಾ ಅಥವಾ ಯತ್ನಿಕ್ಕೆ ಪ್ರೇರಕ ಆಗುವಂಥಾ ಪ್ರತಿ ಮನುಷ್ಯನೂ ವಂದು ಸಾವಿರ ರೂಪಾಯಿಗೆ ಮಿಾರದ ಜುರ್ಮಾನೆ ತೆರುವದಕ್ಕೆ ಗುರಿಯಾಗತಕ್ಕದ್ದು. ಮತ್ತು ಹಾಗೆ ಯತ್ನಿಸೋಣಾದಂಥಾ ಅಥವಾ ಮನುಷ್ಯರ ಕೇವನಾರ್ಹವಾಗಿ ಮಾಡಲ್ಪಟ್ಟಿಂಥಾ ಸಾರಾಯಿಗಳನ್ನು ಸ್ವಾಧೀನವಲ್ಲಿಟ್ಟುಕೊಂಡಿರತಕ್ಕ ಮನುಷ್ಯನು, ಮಾಜಿಸ್ಟ್ರೇಟ್ ಅಧಿಕಾರವನ್ನು ಚಲಾಯಿಸುತ್ತಿರುವ ಯಾವದಾದರೂ ಆಫೀಸರರ ಮುಂದೆ ತಪ್ಪು ಹೊರಿಸಲ್ಪಟ್ಟ ಮೇಲೆ ಐನೂರು ರೂಪಾಯಿಗಳಿಗೆ ಮಿಾರದ ಜುರ್ಮಾನೆ ತೆರುವದಕ್ಕೆ ಗುರಿಯಾಗತಕ್ಕದ್ದು.

ಅಂಥಾ ಜುರ್ಮಾನೆಗಳು ಹ್ಯಾಗೆ ವಸೂಲ್ಮಾಡಲ್ಪಡತಕ್ಕವು.

V. ಮೇಲ್ಕಂಡ ಕಡೇ ಯರಡು ಸೆಕ್ಷನ್‌ಗಳ ಪೈಕಿ ಯಾವ ಸೆಕ್ಷನ್ ಪ್ರಕಾರವೇ ಆಗಲಿ ವಿಧಿಸಲ್ಪಟ್ಟ ಯಾವ ಜುರ್ಮಾನೆಯಾದರೂ ಅದು ಪಾವತಿ ಮಾಡಲ್ಪಡದಿದ್ದರೆ, ಸದರೀ ಜುರ್ಮಾನೆಯು ವಿಧಿಸಲ್ಪಟ್ಟ ಆಫೀಸರರ ಸೈನಿ ಕೊಡೋಸ್ತಾದ ವಾರಂಟಿನ ಮೇಲೆ ತಪ್ಪಿತಸ್ಥನ ಸಾಮಾನು ಮತ್ತು ಆಸ್ತಿಯ ಜಪ್ತಿ ವ ಹರಾಜ್ ಮೂಲಕ ವಸೂಲ್ಮಾಡಲ್ಪಡಬಹುದು.

ಜುರ್ಮಾನೆಯು ಪಾವತಿ ಮಾಡಲ್ಪಡದಿದ್ದರೆ ಜಪ್ತಿ ವಾರಂಟು ಜಾರಿಯೊಗಿ ವಾಪಸು ಬರುವ ನೀಕ್ಷಣೆ ಮೇಲೆ ತಪ್ಪಿತಸ್ಥನನ್ನ ಪಹರೇದಲ್ಲಿ ಪಡಬಹುದು.

VI. ಅಂಥಾ ಯಾವದಾದರೂ ಜುರ್ಮಾನೆಯು ಕೂಡ್ಲೆ ಪಾವತೀ ಮಾಡಲ್ಪಡದಿದ್ದರೆ ಅಂಥಾ ಯಾವ ಆಫೀಸರಾದರೂ, ಸದರೀ ಜಪ್ತಿ ವಾರಂಟು ಅನುಕೂಲವಾಗಿ ಜಾರಿಯಿಂದ ವಾಪಸು ಬರುವವರಿಗೂ, ಪರಂತು ಸದರೀ ತಪ್ಪಿತಸ್ಥನು ಜಪ್ತಿ ವಾರಂಟು ವಾಪಸಾಗುವದಕ್ಕೆ ಗೊತ್ತಾದ ಅಂಥಾ ಸ್ಥಳದಲ್ಲಿನ ತಾರೀಖಿನಲ್ಲಿ ಹಾಜರಾಗುವ ಬಗ್ಗೆ ಅಂಥಾ ಆಫೀಸರರಿಗೆ ತೃಪ್ತಿಕರವಾಗಿ ಜಾಮೀನು ಕೊಡದಿದ್ದರೆ, ಸದರೀಯವನನ್ನು ದಸ್ತಗಿರಿ ಮಾಡಿ ಬಂದೋಬಸ್ತಾಗಿ ಪಹರೇಯಲ್ಲಿಡುವಂತೆ ಹುಕ್ಕುಂ ಮಾಡಬಹುದು.

ಜುರ್ಮಾನೆಯು ಜಪ್ತಿ ಮೂಲಕ ವಸೂಲಾಗದಿದ್ದರೆ ತಪ್ಪಿತಸ್ಥನನ್ನ ಜೈದ ಮಾಡುವಣ.

VII. ಅಂಥಾ ವಾರಂಟು ಜಾರಿಯಿಂದ ವಾಪಸಾದಾಗ ಸದರೀ ಜುರ್ಮಾನೆ ವಸೂಲಿಗೆ ಸಾಕಾದಷ್ಟು ಜಿಂದಗಿ ಜಪ್ತಾ ಗಲಾರದೆಂದು ತೋರಿಬಂದರೆ ಮತ್ತು ಸದರೀ ಜುರ್ಮಾನೆಯು ಕೂಡ್ಲೆ ಪಾವತಿ ಮಾಡಲ್ಪಡದಿದ್ದರೆ, ಅಥವಾ ಸದರೀ ಜುರ್ಮಾನೆವಸೂಲಿ ಬಗ್ಗೆ ಬಂದು ಜಪ್ತಿ ವಾರಂಟು ಸಾದರ್ಮಾಡಿದರೆ ಸಾಕಾದಷ್ಟು ಸಾಮಾನು ಮತ್ತು ಆಸ್ತಿ ಇಲ್ಲವೆಂಬದಾಗಿ ತಪ್ಪಿತಸ್ಥನ ವಪ್ಪಿಕೆ ಮೇಲಾಗಲಿ ಅನ್ಯಥಾ ಆಗಲಿ ಅಂಥಾ ಆಫೀಸರರಿಗೆ ತೃಪ್ತಿಕರವಾಗಿ ಕಾಣಬಂದರೆ, ಅಂಥಾ ಯಾವ ಆಫೀಸರಾಗಲಿ ತಮ್ಮ ಸೈನಿ ವಾರಂಟು ಮೂಲಕ ತಪ್ಪಿತಸ್ಥನನ್ನು ಸಿವಿಲ್ ಜೈಲಿಗೆ ಕಮ್ಮಿಟ್ ಮಾಡಿ, ಅಲ್ಲಿ ಸದರಿಯವನು ಜುರ್ಮಾನೆ ಮೊಬಲಗು ಐವತ್ತು ರೂಪಾಯಿಗೆ ಮಿಗಾರದೆ ಇದ್ದ ಸಂದರ್ಭದಲ್ಲಿ ಎರಡು ತಿಂಗಳಿಗೆ ಮಿಗಾರದ ಒಂದು ಕಾಲದ ಪರ್ಯಂತವೂ, ಜುರ್ಮಾನೆ ಮೊಬಲಗು ಐದು ನೂರು ರೂಪಾಯಿಗೆ ಮಿಗಾರದೆ ಇದ್ದ ಸಂದರ್ಭದಲ್ಲಿ ನಾಲ್ಕು ತಿಂಗಳಿಗೆ ಮಿಗಾರದ ಐದು ಕಾಲದ ಪರ್ಯಂತವೂ, ಇತರ ಯಾವ ಸಂದರ್ಭದಲ್ಲಿಯಾದರೂ ಆರು ತಿಂಗಳಿಗೆ ಮಿಗಾರದವಂದು ಕಾಲದ ಪರ್ಯಂತವೂ, ತಮಿಗೆ ಯುಕ್ತ ತೋರುವಂತೆ ಪೈದ್ ಮಾಡಲ್ಪಡತಕ್ಕದ್ದೆಂದು ವಿಧಿಸಬಹುದು. ಹಾಂಗೆ ಜೈಲಿಗೆಕಳುಹಿಸುವಣವು ಮೇಲ್ಕಂಡ ಪ್ರತಿ ಸಂಗತಿಯಲ್ಲಿಯೂ ಮೊಬಲಗು ಪಾವತಿ ಆದಾಗ ಗೊತ್ತು ಮಾಡಲ್ಪಡತಕ್ಕದ್ದು.

VIII. * * * * * *

III ಯಾ IVನೇ ಸೆಕ್ಷನ್ ಪ್ರಕಾರ ತಪ್ಪು ಹೊರಿಸಲ್ಪಟ್ಟ ಸಂಗತಿಯಲ್ಲಿ ದಂಡವಾಗಿ ತೆಗದುಕೊಳ್ಳುವಣ.

IX. ಈ ಆಕ್ಟಿನ III ಯಾ IVನೇ ಸೆಕ್ಷನ್ ಪ್ರಕಾರ ತಪ್ಪಿಹೊರಿಸಲ್ಪಡುವ ಪ್ರತಿ ಸಂಗತಿಯಲ್ಲಿಯೂ ದ್ರಾವಕ ಯಾ ಸ್ಪಿರಿಟ್‌ಸಾರಾಯಿಗಳು ಅವ್ರಗಳಡಗಿರತಕ್ಕ ಪೀಪಾಯಿ ಯಾ ಮಾತ್ರ ದೇಖೀಲು ಅಂಥಾ ದ್ರಾವಕ ಯಾ ಸಾರಾಯಿಯನ್ನು ಪೆಯ್ಯುವ ಬಗ್ಗೆ ಉಪಯೋಗಿಸಲ್ಪಟ್ಟ ಭಂಡಿ, ದೋಣಿ ಮತ್ತು ಜೀವರ ಯಾ ಜೀವರ್‌ಗಳು ಸಹಿತ ದಂಡವಾಗಿ ಸರಕಾರಕ್ಕೆ ಕೇರಿಕೊಳ್ಳವದಕ್ಕೆ ಗುರಿಯಾಗತಕ್ಕದ್ದು.

ಕೆ. ಕೃಷ್ಣಾದ್ರಿ ಅಯ್ಯರ್,
ದಿವಾನ್, ಮೈಸೂರ.